

ಡಾ.ಅ. ಶ್ರೀಧರ
ಮನೋವಿಜ್ಞಾನಿ

ಪೋಷಕರೇ, ನಿಮ್ಮ ಮಕ್ಕಳ ಮಾನಸಿಕ ಬೆಳವಣಿಗೆಯಲ್ಲಿ ಅಸಹಜತೆ ಕಂಡು ಬರುತ್ತಿದೆಯೇ? ನಿಮ್ಮ ಸಮಸ್ಯೆಗಳಿಗೆ, ಆತಂಕಗಳಿಗೆ ಮನೋವಿಜ್ಞಾನಿ ಡಾ.ಅ. ಶ್ರೀಧರ ಅವರು ಉತ್ತರಿಸುತ್ತಾರೆ.

ನನ್ನ ಮಗನಿಗೆ 11 ವರ್ಷ. ಸಾಧಾರಣವಾದ ಇಂಗ್ಲಿಷ್ ಮಾಧ್ಯಮ ಶಾಲೆಯೊಂದರಲ್ಲಿ ಓದುತ್ತಿದ್ದಾನೆ. ತರಗತಿಯಲ್ಲಿ ಹೆಚ್ಚಿನ ಅಂಕಗಳನ್ನು ಗಳಿಸಿದ್ದಾನೆ. ಆಟ, ಓಟಗಳಲ್ಲಿ ಹೆಚ್ಚಿನ ಆಸಕ್ತಿ ಇಲ್ಲ. ಸ್ವಲ್ಪ ಮಟ್ಟಿಗೆ ಆಸ್ತಮಾ ಇದೆ. ಹೀಗಾಗಿ ಒಮ್ಮೊಮ್ಮೆ ದೇಹಾಲಸ್ಯ ಮತ್ತು ಮಾನಸಿಕ ನಿತ್ರಾಣದಿಂದ ಬಳಲುತ್ತಾನೆ. ಇವುಗಳೊಂದಿಗೆ ಅವನು ಪಡೆಯುತ್ತಿರುವ ಅಂಕಗಳಿಗೂ ಅವನ ನಿಜ ಸಾಮರ್ಥ್ಯಕ್ಕೂ ಸಂಬಂಧವಿಲ್ಲವೆನ್ನುವುದು ಕೆಲವು ವಾರಗಳ ಹಿಂದೆ ಗೊತ್ತಾಯಿತು. ಇನ್ನೊಂದು ಶಾಲೆಯಲ್ಲಿ ಅದೇ ತರಗತಿಯಲ್ಲಿ ಓದುತ್ತಿರುವ ಅವನ ಸೋದರ ಸಂಬಂಧಿಯ ತಿಳಿವಳಿಕೆ ಮತ್ತು ಓದುಬರೆಯುವ ಮಟ್ಟದ ಹೋಲಿಕೆಯಿಂದ ಇದು ತಿಳಿಯಿತು. ಉದಾ: ಇಂಗ್ಲಿಷ್ ಸ್ಪೆಲಿಂಗುಗಳು, ಕಾಗುಣಿತಗಳನ್ನು ತಪ್ಪುತಪ್ಪಾಗಿ ಬರೆಯುತ್ತಾನೆ, ಮತ್ತು ಸರಿಯಾಗಿ ಮಗ್ಗಿ ಹೇಳುವುದಿಲ್ಲ. ಇತ್ತೀಚೆಗಷ್ಟೇ ಇದನ್ನು ನಾವು ಗಮನಿಸಿದ್ದು. ನಮಗಿರುವ ಸಮಸ್ಯೆ ಎಂದರೆ, ಈ ವಿಷಯಗಳನ್ನು ಶಾಲೆಯವರೊಂದಿಗೆ ಪ್ರಸ್ತಾಪಿಸಬಹುದೆ? ಒಂದು ವೇಳೆ ಅವರು ಇದನ್ನು ಒಪ್ಪದೇ ಇದ್ದರೆ ನಾವೇನು ಮಾಡಬೇಕು? ನಮ್ಮ ಮಗುವನ್ನು ಬೇರೊಂದು ಶಾಲೆಗೆ ಸೇರಿಸಬೇಕೆ ?ಅಥವಾ ಸುಮ್ಮನಿದ್ದುಬಿಡಬೇಕೆ? ಯಾವುದು ಸರಿ ಎನ್ನುವುದು ತಿಳಿಯುತ್ತಿಲ್ಲ. ಏಕೆಂದರೆ, ನಮ್ಮ ಮಗನನ್ನು ಬೇರೊಂದು ಶಾಲೆಗೆ ವರ್ಗಾಯಿಸುವಷ್ಟು ಸೌಕರ್ಯ ನಮಗೆ ಇಲ್ಲ. ಹೀಗಾಗಿ ನಮ್ಮ ಮಗುವಿನ ಶೈಕ್ಷಣಿಕ ಸಾಮರ್ಥ್ಯವನ್ನು ಉತ್ತಮಗೊಳಿಸುವುದಕ್ಕೆ ಮಾರ್ಗವೇನಾದರೂ ಇದ್ದರೆ ತಿಳಿಸಿಕೊಡುವುದು.

-ತ್ರಿವೇಣಿ ಬೆಂಗಳೂರು

ನಿಮ್ಮ ಮಗನ ಕಲಿಕೆಯ ಸಾಮರ್ಥ್ಯ ಮತ್ತು ಮಟ್ಟವನ್ನು ತಿಳಿಯುವುದಕ್ಕೆ ಅವಕಾಶಗಳು ಮತ್ತು ತಂತ್ರಗಳು ಬೆಂಗಳೂರಿನಂತಹ ನಗರದಲ್ಲಿ ಇದೆ. ಇದಲ್ಲದೆಯೇ ನಿಮ್ಮ ಮಗು ಸರಿಯಾಗಿ ಕಲಿಯುತ್ತಿದ್ದಾನೆಯೇ, ಕಲಿಯಬಲ್ಲನೇ ಎನ್ನುವುದನ್ನು ತಿಳಿಯುವುದು ಕಷ್ಟವೇನಲ್ಲ. ಅವನ ಸಹೋದರ ಸಂಬಂಧಿಯಲ್ಲಿರುವ ಕಲಿಕೆಯ ಮಟ್ಟವನ್ನು ಗಮನಿಸಿ, ಆ ಮಟ್ಟದಲ್ಲಿ ನಿಮ್ಮ ಮಗ ಇಲ್ಲ ಎನ್ನುವುದನ್ನು ಗುರುತಿಸಿದ್ದೀರಿ. ಈ ಕ್ರಮದಲ್ಲಿ ತಪ್ಪೇನು ಇಲ್ಲ. ಇದೇ ಮಾದರಿಯಲ್ಲಿ ನಿಮ್ಮ ಮಗುವು ಕಲಿತಿರುವ ವಿಷಯಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಪಡೆದುಕೊಳ್ಳಿ. ಉದಾಹರಣೆಗೆ, ಅವನಿಗೆ ಸರಿಯಾಗಿ ತಿಳಿದಿರುವಂತಹ ಇಂಗ್ಲಿಷ್ ಪದಗಳು, ಕನ್ನಡ ಪದಗಳನ್ನು ಗುರುತಿಸುವಂತೆ ಮಾಡಿ. ತಪ್ಪಾಗಿ ಕಲಿತಿರುವ ಪದಗಳನ್ನು ಸರಿಪಡಿಸುವುದರತ್ತ ಗಮನಹರಿಸಿ. ಹಾಗೆಯೇ, ತಪ್ಪು ಉಂಟಾಗಲು ಕಾರಣವೇನು ಎಂದು ತಿಳಿದುಕೊಳ್ಳಿ. ತಪ್ಪುತಪ್ಪಾಗಿ ಬರೆಯುವುದು ಅಭ್ಯಾಸವಾಗಿದ್ದರೆ ಅದನ್ನು ಬದಲಾಯಿಸಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಿ. ಸರಿಯಾಗಿ ಕಲಿಸುವ ಸಾಮರ್ಥ್ಯ ಮತ್ತು ವಿಧಾನವು ನಿಮಗೆ ತಿಳಿದಿದ್ದರೆ ನೀವೇ ಕಲಿಸಿ. ಕಾಗುಣಿತ, ಮಗ್ಗಿಯನ್ನು ಸರಿಯಾಗಿ ಓದುವುದು, ಗುರುತಿಸುವುದು ಮತ್ತು ಬರೆಯುವುದಕ್ಕೆ ಒತ್ತು ನೀಡಿ. ಕೆಲವು ವಿಷಯಗಳನ್ನು ಜೋರಾಗಿ ಓದುವುದರ ಮೂಲಕ ತಪ್ಪುಗಳನ್ನು ನೀವು ಗುರುತಿಸಬಹುದು. ಹಾಗೆಯೇ ಓದಿದ್ದನ್ನು ಬರೆಯುವುದರ ಮೂಲಕ ಬರವಣಿಗೆಯಲ್ಲಿರುವ ತಪ್ಪುಗಳನ್ನು ಗುರುತಿಸಿ ಸರಿಪಡಿಸಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬಹುದು. ಇದೆಲ್ಲಕ್ಕಿಂತಲೂ ಮುಖ್ಯವಾಗಿರುವುದು, ಅವನಲ್ಲಿ ಆತ್ಮವಿಶ್ವಾಸ ಇಳಿಯದಂತೆ ನೋಡಿಕೊಳ್ಳುವುದು. ಕಲಿಯುವ ಮಕ್ಕಳು ತಪ್ಪು ಮಾಡುವುದು ಸ್ವಾಭಾವಿಕ, ಮೇಲಿಂದ ಮೇಲೆ ತಪ್ಪು ಮಾಡಿದರೂ ಸಹ ನಿಮ್ಮ ತಾಳ್ಮೆ ಕೆಡದಿರಲಿ. ಶಿಕ್ಷೆ ಬೇಕು ಎನ್ನುವ ಉದ್ದೇಶದಿಂದ ಮಕ್ಕಳು ತಪ್ಪುಮಾಡುವುದಿಲ್ಲ. ನಿಮಗೆ ಹಿಂಸೆ, ನೋವು ಉಂಟಾಗಲಿ ಎಂದು ತಪ್ಪನ್ನು ಮಾಡಲಾರರು. ಆದುದರಿಂದ ಸಂಯಮ ಮತ್ತು ಕಾಳಜಿಯಿಂದ ನಿಮಗೆ ತಿಳಿದಿರುವುದನ್ನು ಸರಿಯಾಗಿ ಹೇಳಿಕೊಡಿ. ಬಹುಶಃ ನಿಮ್ಮ ಹುಡುಗನಲ್ಲಿ ಕಲಿಕೆಯ ಸಾಮರ್ಥ್ಯವು ಉತ್ತಮವಾಗಿಯೇ ಇರಬಹುದು. ಇನ್ನು ಶಾಲೆಯ ಬಗ್ಗೆ, ನಿಮ್ಮ ಅಭಿಪ್ರಾಯವನ್ನು ಸಂಬಂಧಪಟ್ಟವರಲ್ಲಿ ವ್ಯಕ್ತಪಡಿಸುವುದು ಸರಿಯಷ್ಟೆ. ಸೂಕ್ತವಾಗಿ ತರಬೇತಿ ಪಡೆಯದ ಶಿಕ್ಷಕರು ಮಕ್ಕಳಿಗೆ ಸರಿಯಾಗಿ ಪಾಠ ಹೇಳಿಕೊಡಲಾರರು. ಬಹುಶಃ ನಿಮ್ಮ ಹುಡುಗ ಓದುತ್ತಿರುವ ಶಾಲೆಯಲ್ಲಿಯೂ ಇಂತಹದ್ದೇ ಪರಿಸ್ಥಿತಿಯಿದೆ ಎನಿಸುತ್ತದೆ. ಇದನ್ನು ಸರಿಪಡಿಸುವ ಹೊಣೆಗಾರಿಕೆ ಶಾಲೆಯ ಆಡಳಿತವರ್ಗಕ್ಕೆ ಸೇರಿದ್ದೇ ಆದರೂ ಈ ಬಗ್ಗೆ ಸುಮ್ಮನಿರುವವುದರಿಂದ ಪ್ರಯೋಜನವಿಲ್ಲ. ಇತರ ಪೋಷಕರ ಜೊತೆಗೂಡಿ ಶಾಲೆಯ ಆಡಳಿತವರ್ಗದ ಗಮನಕ್ಕೆ ಈ ವಿಷಯವನ್ನು ತನ್ನಿ. ಇದು ಅದಷ್ಟು ಬೇಗ ಆಗಲಿ.

ನಮಗೆ ಒಬ್ಬನೇ ಮಗ. ಅವನು ಮೂರು ವರ್ಷಗಳಿಂದ ಚೆನ್ನೈ ನಗರದಲ್ಲಿ ಎಂಜಿನಿಯರ್ ಆಗಿದ್ದಾನೆ. ಅವನಿಗೀಗ 26 ವರ್ಷ. ನಮ್ಮದು ಸಣ್ಣ ರೈತಾಪಿ ಕುಟುಂಬ. (ನಾನು ಸಹ ತಕ್ಕ ಮಟ್ಟಿಗೆ ಓದುಬರಹ ಬಲ್ಲವ) ಓದುಬರಹದಲ್ಲಿ ಮುಂದಿದ್ದ ಅವನಿಗೆ ಒಳ್ಳೆಯ ವಿದ್ಯಾಭ್ಯಾಸ ಅವರಿವರ ನೆರವಿನಿಂದ ದೊರಕಿತು. ತುಂಬಾ ಒಳ್ಳೆಯ ಹುಡುಗ, ಮೃದು ಸ್ವಭಾವದವ ಎಂದೇ ನೆಂಟರಿಷ್ಟರಲ್ಲಿ ಮಾತಿತ್ತು. ಇದೀಗ ಮದುವೆ ಪ್ರಸ್ತಾಪ ಮಾಡುತ್ತಿದ್ದೇವೆ. ನಮ್ಮ ಸಂಪ್ರದಾಯಕ್ಕೆ ಸರಿಹೊಂದುವ ಹುಡುಗಿಯನ್ನು ಗುರುತಿಸಿದ್ದೇವೆ. ಆದರೆ, ಅದರ ಬಗ್ಗೆ ಅವನಿಗೆ ಆಸಕ್ತಿ ಇಲ್ಲ. ಅಷ್ಟೇ ಅಲ್ಲ, ಈ ವಿಷಯ ಪ್ರಸ್ತಾಪಿಸಿದರೆ ಮಾತು ಮುಂದುವರೆಸುವುದಿಲ್ಲ ಎನ್ನುತ್ತಾನೆ. ಒಂದೆರಡು ಸಲ ಒತ್ತಾಯ ಮಾಡಿದ್ದಕ್ಕೆ ಹಲವು ತಿಂಗಳುಗಳ ಕಾಲ ನಮ್ಮೊಂದಿಗೆ ಸಂಪರ್ಕವನ್ನೇ ಇರಿಸಿಕೊಂಡಿರಲಿಲ್ಲ. ನಮ್ಮ ವೃದ್ಧಾಪ್ಯಕ್ಕೆ ಅವನು ನೆರವಾಗುತ್ತಾನೆಯೇ ಎನ್ನುವಂತಹ ಆತಂಕ ನಮ್ಮನ್ನು ಈಗಲೇ ಕಾಡುತ್ತಿದೆ. ಅವನಿಗೆ ಬುದ್ಧಿ ಹೇಳುವವರು ಯಾರು ಎನ್ನುವುದೇ ತಿಳಿಯುತ್ತಿಲ್ಲ. ಅವನ ಮನಸ್ಸಿಗೆ ಏನಾಗುತ್ತಿದೆ ಎನ್ನುವುದು ಸಹ ನಮಗೆ ಗೊತ್ತಾಗುತ್ತಿಲ್ಲ. ಇಂತಹ ಸ್ಥಿತಿಯಲ್ಲಿ ನಾವೇನು ಮಾಡಬೇಕು ಎಂದು ತಿಳಿಸಿಕೊಟ್ಟರೆ ತುಂಬಾ ಉಪಕಾರವಾಗುತ್ತದೆ.

-ರಾಘವೇಂದ್ರಪ್ಪ, ಚೆನ್ನಪಟ್ಟಣ

ವಿದ್ಯಾವಂತನಾಗಿರುವ ನಿಮ್ಮ ಮಗನ ಬಗ್ಗೆ ಹೀಗೆ ಚಿಂತಿಸುವುದು ಸರಿಯಲ್ಲ. ಒಳ್ಳೆಯ ಕೆಲಸದಲ್ಲಿದ್ದಾನೆ ಎನ್ನುವುದರ ಬಗ್ಗೆ ಹೆಮ್ಮೆ ಇದ್ದರಷ್ಟೇ ಸಾಲದು, ಅವನಲ್ಲಿ ವಿಶ್ವಾಸ ಇಡಬೇಕು. ಮದುವೆಯ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಮುಂಚಿತವಾಗಿ ಅವನ ಮನಸ್ಸು ಏನೆಂಬುದನ್ನು ನೀವು ತಿಳಿದುಕೊಳ್ಳಬೇಕು. ನಿಮ್ಮೊಂದಿಗೆ ಇದ್ದು ಸಂಸಾರ ನಡೆಸುವ ಸ್ಥಿತಿಯಲ್ಲಿ ಅವನು ಇದ್ದಾನೆಯೇ ಎನ್ನುವ ಪ್ರಶ್ನೆಯನ್ನು ಇನ್ನು ಮುಂದಾದರೂ ಕೇಳಿಕೊಳ್ಳಿ. ಅಂದರೆ, ನೀವಿರುವಲ್ಲಿಗೆ ಬಂದು ಸಂಸಾರ ಹೂಡುವುದಕ್ಕೆ ಆಸಕ್ತಿ ಮತ್ತು ಅವಕಾಶ ಸಾಧ್ಯವೆ ಎನ್ನುವುದನ್ನು ಅವನಿಂದಲೇ ತಿಳಿದುಕೊಳ್ಳಿ. ಇದಕ್ಕಿಂತ ಮುಖ್ಯವಾಗಿ, ಅವನ ಭವಿಷ್ಯ ಜೀವನವನ್ನು ರೂಪಿಸಿಕೊಳ್ಳುವ ಮನಸ್ಸು ಮಾಡಿಕೊಂಡಿದ್ದರೆ ಅದಕ್ಕೆ ನಿಮ್ಮ ಪ್ರೋತ್ಸಾಹ. ಶಿಕ್ಷಣ ಪಡೆದು ಉದ್ಯೋಗಸ್ಥನಾಗಿರುವ ನಿಮ್ಮ ಮಗನ ಜಗತ್ತಿಗೂ ನಿಮ್ಮ ಜಗತ್ತಿಗೂ ಸಾಕಷ್ಟು ಅಂತರವಿದೆ. ಅವನ ವೃತ್ತಿ ಜಗತ್ತು ನಿಮಗೆ ಪರಿಚಯವಿಲ್ಲದೇ ಇರಬಹುದು. ಇದಕ್ಕೆ ಸರಿಹೊಂದುವಂತಹ ಆಸೆ ಆಕಾಂಕ್ಷೆಗಳನ್ನು ಅವನು ಈಗಾಗಲೇ ರೂಪಿಸಿಕೊಂಡಿರಬಹುದು.ಹೀಗಾಗಿ ನಿಮ್ಮ ಆಗ್ರಹಗಳತ್ತ ಅವನ ಮನಸ್ಸು ಹೋಗುತ್ತಿಲ್ಲ. ಹೀಗೆಂದ ಮಾತ್ರಕ್ಕೆ ನಿಮ್ಮನ್ನು ಪೋಷಿಸುವ ಹೊಣೆಗಾರಿಕೆ ಅವನಲ್ಲಿ ಇಲ್ಲವಾಗುತ್ತಿದೆ ಎನ್ನುವ ಅಪನಂಬಿಕೆ ಬೇಡ. ಇಂತಹ ವಿಷಯಗಳನ್ನು ಚರ್ಚಿಸುವುದಕ್ಕೂ ಕೆಲವು ಮಕ್ಕಳು ಇಷ್ಟ ಪಡುವುದಿಲ್ಲ. ಅಪ್ಪ ಅಮ್ಮರನ್ನು ಸಾಕುವ ಹೊಣೆಗಾರಿಕೆ ಬಗ್ಗೆ ಅವರಲ್ಲಿ ಅರಿವು ಇರುತ್ತದೆ. ಇಲ್ಲಸಲ್ಲದ ವಿಷಯಗಳತ್ತ ಗಮನಹರಿಸುವುದರಿಂದ ಪ್ರಯೋಜನವಿಲ್ಲ. ಅವನಿಗೆ ಇಷ್ಟ ಬಂದ ಹುಡುಗಿಯನ್ನು ಮದುವೆ ಮಾಡಿಕೊಂಡರೆ ನಿಮ್ಮ ಅಭ್ಯಂತರವಿಲ್ಲ ಎಂಬ ಅಭಿಪ್ರಾಯವನ್ನು ಅವನಲ್ಲಿ ಮೂಡುವಂತೆ ಮಾಡಿ. ಅವರಿವರ ಒತ್ತಾಯಕ್ಕೆ ಮಣಿದು ಮದುವೆಯ ಬಗ್ಗೆ ಆತುರದ ತೀರ್ಮಾನ ಬೇಡ. ಮದುವೆ ಗೊತ್ತುಮಾಡುವುದು ಹಿರಿಯರ ಹೊಣೆಗಾರಿಕೆ ಇರಬಹುದು. ಇದೇ ಮುಂದುವರೆಯಬೇಕು ಎಂದು ಆಗ್ರಹಪಡಿಸುವುದು ತರವಲ್ಲ. ಅವನ ಮನಸ್ಸಿಗೆ ನೋವಾಗುವಂತಹ ವಿಷಯಗಳನ್ನು ಪ್ರಸ್ತಾಪಿಸುವ ಮುಂಚೆ ಆಲೋಚನೆ ಮಾಡುವುದು ಒಳ್ಳೆಯದು. ಅವನು ಮೃದು ಸ್ವಭಾವನೆಂದು ಹೇಳಿದ್ದೀರಿ. ಸರಿಯಾದ ವಿಧಾನದಲ್ಲಿ ಈ ಗುಣವನ್ನು ನಿಮ್ಮ ಮನಸ್ಸಿಗೆ ಹಿತವಾಗುವ ರೀತಿಯಲ್ಲಿ ಬಳಸಿಕೊಳ್ಳುವುದರತ್ತ ಪ್ರಯತ್ನಿಸಿ. ಅಂದರೆ, ಅವನ ಜೀವನ ಶೈಲಿ, ಒತ್ತಡಗಳ ಬಗ್ಗೆ ತಿಳಿವಳಿಕೆ ಪಡೆದುಕೊಳ್ಳಿ. ಅಲ್ಲದೆ, ನಿಮ್ಮ ಭವಿಷ್ಯ ಅವನ ನೆರವಿನಿಂದಲೇ ಆಗುವಂತಹ ಪರಿಸ್ಥಿತಿಯನ್ನು ತಡೆಗಟ್ಟಲು ಅಥವಾ ಮಾರ್ಪಡಿಸುವ ಅವಕಾಶಗಳು ಇದ್ದರೆ ಅವುಗಳತ್ತವೂ ಗಮನ ಹರಿಸಿ.

ನಿಮ್ಮ ಪ್ರಶ್ನೆಗಳನ್ನು ಕಳುಹಿಸಬೇಕಾದ ವಿಳಾಸ: ಸಂಪಾದಕರು, 'ಸುಧಾ', 'ನನ್ನ ಮಗು ಹೀಗೇಕೆ?' ವಿಭಾಗ, 75, ಎಂಜಿ. ರಸ್ತೆ, ಬೆಂಗಳೂರು-560001, ಮೊಬೈಲ್ 9880937122